ಹೇಳುತ್ತ, 'ಒಂದಂತೂ ಪಿತೃತ್ವವನ್ನು ಪ್ರಶ್ನಿಸಿ ಹೂಡಿದ ಮೊಕದ್ದಮೆ!' ಎಂದಿದ್ದಳು ಐರಿನ್ ನೊಂದ ದನಿಯಲ್ಲಿ. ರುಸ್ತುಂ ವಾಡಿಯಾ ತನ್ನ ಮಗಳ ತಂದೆ ತಾನಲ್ಲವೆಂದು ಸಾಧಿಸಲು ಹೊರಟಿದ್ದನಂತೆ. ಮೊದಲೇ ಪೆರಿನಾಝಳದು ಸಂಕೋಚದ ಸ್ವಭಾವ. ದೀರ್ಘಕಾಲ ನಡೆದ ಮೊಕದ್ದಮೆ ಹಾಗೂ ಪತ್ರಿಕೆಗಳಲ್ಲಿ ವಿವರವಾಗಿ ಬರುತ್ತಿದ್ದ ಮನೆ-ಜಗಳದ ಖಾಸಗಿತನ – ಇವು ವೈಯುಕ್ತಿಕ ಬದುಕಿನ ಮೇಲೆ ನಡೆದ ಹೊಡೆತಗಳಂತೆ ಅನಿಸಿರಬಹುದು; ಅದಲ್ಲದೆ ತಂದೆಯಿಂದ ತಿರಸ್ಕರಿಸಲ್ಪಡುವ ಪ್ರಸಂಗವೆಂದರೆ ಎಂತಹ ಮನಸ್ಸನ್ನೂ ಅಧೀರಗೊಳಿಸುವಂಥದ್ದೇ. ಅಂತೂ ಅವಳ ಸುದ್ದಿಯೇ ಯಾರಿಗೂ ತಿಳಿಯದಂತಾಗಿ ಬಿಟ್ಟಿತ್ತು. ಅವಳು ಜೀವ ತೆಗೆದುಕೊಂಡಿದ್ದಿರಬಹುದು ಎಂದೂ ಎಷ್ಟೋ ಮಂದಿ ಆಗ ಊಹೆ ಮಾಡಿದ್ದರಂತೆ. ಮೊಬೈಲ್ ಫೋನು, ಇಂಟರ್‌ನೆಟ್, ಇಮೇಲ್‌ಗಳು ಇಲ್ಲದಿದ್ದ ಆ ಕಾಲದಲ್ಲಿ ಸರಿಯಾದ ಸಂಪರ್ಕಗಳಿಲ್ಲದೆ ವದಂತಿಗಳನ್ನೇ ನಂಬುವ ಪ್ರಸಂಗವಿತ್ತು.



ತಂದೆ-ತಾಯಿಯರೊಂದಿಗೆ ಕಳೆದ, ಕಲಹಗಳಿಲ್ಲದ ಚಿಕ್ಕಂದಿನ ನಿರಾಳ ಕಾಲಕ್ಕಾಗಿ ಅವಳ ಮನಸ್ಸು ಹಾತೊರೆದಿರಬಹುದೇ? ಅವರಿಂದ ಕೇಳುತ್ತಿದ್ದ ಮಕ್ಕಳ ಕತೆಗಳಲ್ಲಿ, ಗೊಂಬೆಗಳ ಒಡನಾಟದಲ್ಲಿ, ಅವುಗಳ ಕತೆಗಳಲ್ಲಿ ತನ್ನ ಮುರುಟಿಹೋದ ಬಾಲ್ಯವನ್ನು ಪುನಃನಿರ್ಮಾಣ ಮಾಡಿಕೊಳ್ಳುವ ಪ್ರಯತ್ನವೇ ಅವಳದು? ತನಗೆ ದಕ್ಕದ ಹೊರಜಗತ್ತಿನ ಪ್ರತ್ಯಕ್ಷ ಅನುಭವ, ಅಲ್ಲಿ ನಡೆಯುತ್ತಿರುವ ಘಟನೆಗಳು, ಭಾವನೆಗಳು-ಗೆಳೆತನ, ಮಾತುಕತೆ, ಪ್ರೀತಿ, ವಿಶ್ವಾಸ - ಎಲ್ಲವನ್ನೂ ತಾನೇ ಸೃಷ್ಟಿಸಿದ ಈ ಪುಟ್ಟ ಜಗತ್ತಿನಲ್ಲಿ ಅವಳು ಕಂಡುಕೊಂಡಿದ್ದಳೇ? ಗೊಂಬೆಯ ಸಾನ್ನಿಧ್ಯ, ಅದರ ಸ್ಪರ್ಶ ನೀಡುವ ಸುರಕ್ಷತೆಯ ಭಾವ, ಅದರ ನೆನಪಿನಲ್ಲೇ ಇರುವ ಬೆಚ್ಚಗಿನ ನೆಮ್ಮದಿಯ ಅನುಭವ, – ಇವನ್ನು ನಾನು ಗ್ರಹಿಸಬಲ್ಲವಳಾಗಿದ್ದೆ. ಚಿಕ್ಕಂದಿನಲ್ಲೊಮ್ಮೆ, ನನಗಿನ್ನೂ ನೆನಪಿದೆ, ಕೆಲವೇ ನಿಮಿಷಗಳ ಮಟ್ಟಿಗೆ ಒಂಟಿತನದ ಅನುಭವವಾಗಿತ್ತು. ವಿಮಾನ ನಿಲ್ದಾಣದಲ್ಲಿ ಕ್ಷಣಕಾಲ ಅಪ್ಪ-ಅಮ್ಮನನ್ನು ಕಾಣದೆ ಕಂಗಾಲಾಗಿದ್ದೆ. ಆ ಘಟನೆ, ಘಟನೆಗಿಂತ ಹೆಚ್ಚು ಆಗ ಅನುಭವಿಸಿದ ಅಗಲಿಕೆಯ ನೋವಿನ ಒಂದು ರೇಖೆ ಎದೆಯಾಳದಲ್ಲಿ ಹುದುಗಿ ಕುಳಿತುಬಿಟ್ಟಿದೆ. ಆಗ ನನಗೆ ನಾಲ್ಕೋ ಐದೋ ವರ್ಷಗಳಿದ್ದಿರಬೇಕು. ಸುತ್ತಮುತ್ತ ಅಪರಿಚಿತರು, ಕೈಯ್ಯಲ್ಲಿ ಗಟ್ಟಿಯಾಗಿ ಎದೆಗೆ ಚಚ್ಚಿಹಿಡಿದಿದ್ದ ಗೊಂಬೆ, ಎದೆಯಲ್ಲಿ ಎದ್ದೇಳುತ್ತಿದ್ದ ತೀವ್ರತಮ ತರಂಗಗಳ ಒತ್ತಡ! ಅಮ್ಮ-ಅಪ್ಪ ಸಿಕ್ಕಿದ ಮೇಲೂ ಎಷ್ಟೋ ಹೊತ್ತಿನ ವರೆಗೆ ಆ ಗೊಂಬೆಯ ಮೇಲಿನ ಹಿಡಿತವನ್ನು ಸಡಿಲು ಮಾಡಲು ನಾನು ಕೇಳುತ್ತಿರಲಿಲ್ಲವೆಂದು ಅಮ್ಮ ಒಮ್ಮೊಮ್ಮೆ ನೆನಪಿಸಿಕೊಳ್ಳುತ್ತಿದ್ದಳು. ಆ ಗೊಂಬೆಯೊಂದಲ್ಲದಿದ್ದರೆ ಸುತ್ತಲಿನ ಜನಸಾಗರದಲ್ಲಿ ಮುಳುಗಿಹೋಗಬಹುದೆನ್ನುವ, ನನ್ನ ಒಳಮನಸ್ಸಿಗೆ ಮಾತ್ರ ವೇದ್ಯವಾಗುವ ವಿಚಿತ್ರ ಮನಃಸ್ಥಿತಿಯ ತರಂಗಗಳ ಅನುಭೂತಿಯನ್ನು ಶಬ್ದಗಳಲ್ಲಿ ಹೇಳಲು ಇಂದಿಗೂ ಸಾಧ್ಯವಿಲ್ಲವಾಗಿದೆ.

ಹೊರಪ್ರಪಂಚದಿಂದ ವಿಮುಖಳಾಗಿದ್ದರೂ, ತನ್ನದೇ ಪರ್ಯಾಯ ಜಗತ್ತನ್ನು ರೂಪಿಸಿಕೊಂಡ ಪೆರಿನಾಝ್ ಒಂಟಿತನವನ್ನು ಮೀರಿನಿಂತ ಬಗೆ ನನ್ನನ್ನು ದಂಗುಗೊಳಿಸಿತ್ತು. ಏಕಾಕಿತನದ ನೋವು ಅವಳೊಳಗಿನ ಕಲಾತ್ಮಕತೆಯೊಂದಿಗೆ ಬೆರೆತು ಹೊಸತೇ ಲೋಕವನ್ನು ಸೃಷ್ಟಿಸಿಕೊಂಡಿತ್ತು. ಆ ಲೋಕದ ವ್ಯಾಪ್ತಿಯಾದರೂ ಜಗದಗಲ. ಇನ್ನು ಅಲ್ಲಿನ ಜನರೋ ಸಾವಿರಗಟ್ಟಲೆ. ಈಗ ನನಗನಿಸಿತು- ಇಷ್ಟೊಂದು ಮಂದಿಯೊಂದಿಗೆ ಬದುಕುವ ಅವಳು ಒಂಟಿ ಹೇಗಾದಾಳು?

●